**ಸಾಕ್ಷಿಯನ್ನು ದಿನಾಂಕ 25.04.2018 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ ಬಿ.ಎಸ್.ಎಸ್ 1 ಹಾಗೂ 3 ರಿಂದ 7ನೇ ಪ್ರತಿವಾದಿ ಪರ ವಕೀಲರಿಂದ**

1ನೇ ಪ್ರತಿವಾದಿಗೆ ಇಬ್ಬರು ಹೆಂಡದಿರು. ಅವರೆಂದರೆ ಮೊದಲನೇ ಹೆಂಡತಿ ದೇವಕಿ, 2ನೇ ಹೆಂಡತಿ ಶಿವಮ್ಮ. ದೇವಕಿಗೆ ಸುರೇಶ ಹಾಗೂ 3ನೇ ಪ್ರತಿವಾದಿ ಇಬ್ಬರು ಮಕ್ಕಳು ಇರುತ್ತಾರೆ. 2ನೇ ಹೆಂಡತಿಗೆ ಪ್ರತಿವಾದಿ ನಂ.7ನೇದವರಿಗೆ ಪ್ರತಿವಾದಿ ನಂ. 4 ರಿಂದ 6ನೇದವರು ಮಕ್ಕಳು ಇರುತ್ತಾರೆ. ದಾವಾ ಆಸ್ತಿಯನ್ನು ಸನ್ 2008ರಲ್ಲಿ 2ನೇ ಪ್ರತಿವಾದಿ ಕಂಪನಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನನ್ನ ಮದುವೆಯಾದಾಗಿನಿಂದಲೂ ಬೆನಕನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದೇನೆ. ಸನ್ 2008ರಲ್ಲಿ 1ನೇ ಪ್ರತಿವಾದಿ 2ನೇ ಪ್ರತಿವಾದಿಯ ಕಂಪನಿಗೆ ಮಾರಾಟ ಮಾಡಿದ ಹಣದಲ್ಲಿ ನನಗೆ 2 ಎಕರೆ ಜಮೀನದ ಹಣ ನೀಡಿರುತ್ತಾರೆ. ಸನ್ 2008 ರಿಂದ 2ನೇ ಪ್ರತಿವಾದಿಯ ಕಂಪನಿಯ ಕೆಲಸಗಳು ಪ್ರಾರಂಭವಾಗಿರುತ್ತವೆ ಎಂದರೆ ಸರಿ. ಸದರಿ ಕಂಪನಿಯವರು ಭೂಸುದಾರಣೆ ಕಾಯ್ದೆ ಉಲ್ಲಂಘಣೆ ಮಾಡಿರುವ ಕಾರಣ ಸರಕಾರದ ಹೆಸರಿಗೆ ಮ್ಯೂಟೇಷನ ಆಗಿರುತ್ತದೆ ಎಂದರೆ ಸರಿ. ಇವತ್ತಿನವರೆಗೂ ಸರಕಾರದ ಹೆಸರಿನಲ್ಲಿ ಜಮೀನು ಇರುತ್ತದೆ ಎಂದರೆ ಸರಿ. 2ನೇ ಪ್ರತಿವಾದಿ ಕಂಪನಿಯವರು ಸರಕಾರದಿಂದ ದಾವಾ ಆಸ್ತಿಯನ್ನು 30 ವರ್ಷದವರೆಗೆ ಗೇಣಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಗಳಿಗೆ ನನಗೆ ಯಾವುದೇ ಹಕ್ಕು ಹಾಗೂ ಹಿತಾಸಕ್ತಿ ಇರದೇ ಇದ್ದರೂ ಸಹ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಶ್ರೀ ಹೆಚ್.ಎಸ್.ಆರ್ 2ನೇ ಪ್ರತಿವಾದಿ ಪರ ವಕೀಲರಿಂದ**

ನಾನು ಸುಮಾರು 18 ವರ್ಷಗಳಿಂದ ಬೆನಕನಳ್ಳಿ ಗ್ರಾಮದಲ್ಲಿ ವಾಸವಾಗಿದ್ದೇನೆ. ದಾವಾ ಆಸ್ತಿಗೆ 1ನೇ ಪ್ರತಿವಾದಿ ಮಾಲೀಕನಿದ್ದನು ಎಂದರೆ ಸರಿ. 2ನೇ ಪ್ರತಿವಾದಿ 1ನೇ ಪ್ರತಿವಾದಿಯಿಂದ ದಾವಾ ಆಸ್ತಿಯನ್ನು ಸನ್ 2008ರಲ್ಲಿ ಖರೀದಿಸಿರುತ್ತಾನೆ ಎಂದರೆ ಸರಿ. ದಾವಾ ಆಸ್ತಿ ಖರೀದಿ ಹಿಡಿದ ನಂತರ 2ನೇ ಪ್ರತಿವಾದಿ ಕಬ್ಜೆಯುಲ್ಲಿರುತ್ತಾನೆ ಎಂದರೆ ಸರಿ. ಸನ್ 2008ರಲ್ಲಿ ದಾವಾ ಆಸ್ತಿಯ ಮೌಲ್ಯ 10 ಲಕ್ಷ ರೂಪಾಯಿಗಿಂತ ಹೆಚ್ಚು ಇತ್ತು ಎಂದರೆ ಸಾಕ್ಷಿಯು ಎಕರೆಗೆ ಸುಮಾರು ಎಂಟುವರೇ ಲಕ್ಷ ಇರಬಹುದು ಎಂದು ನುಡಿಯುತ್ತಾರೆ. ಸನ್ 2010-2011ರಲ್ಲಿ ದಾವಾ ಆಸ್ತಿಯನ್ನು ಸರಕಾರದಿಂದ ಕಂಪನಿಯವರು ಕೈಗಾರಿಕೊದ್ಯಮ ಸಲುವಾಗಿ 30 ವರ್ಷದ ಗೇಣಿ ಪಡೆದಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯುಲ್ಲಿ ನನಗಾಗಲೀ ಅಥವಾ 3 ರಿಂದ 7ನೇ ಪ್ರತಿವಾದಿಯರಿಗೆ ಯಾವುದೇ ರೀತಿ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಕಂಪನಿಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓದಿ ಹೇಳಿ ಕೇಳಿಸಿದ್ದು ಸರಿ ಇದೆ

ಸಹಿ/-
ಸಿವಿಲ್ ನ್ಯಾಯಾಧೀಶರು
ಸೇಡಂ